# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಧುಗಿರಿ.

ದಿನಾಂಕ 27ನೇ ಜುಲೈ 2026

**ಉಪಸ್ಥಿತರು**

**ಶ್ರೀ ವೆಂಕಟಪ್ಪ ಬಿ.**

ಬಿ.ಎ., ಎಲ್.ಎಲ್.ಎಂ.,

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಮಧುಗಿರಿ**

**ಸಿ.ಸಿ. ಸಂಖ್ಯೆಃ 35/2025**

**ಪಿರ್ಯಾದುದಾರರು** : ರಾಜ್ಯದ ಪರವಾಗಿ ಕೊಡಿಗೇನಹಳ್ಳಿ ಪೊಲೀಸರು
**(ಸರ್ಕಾರಿ ಅಭಿಯೋಜಕರು ಪ್ರತಿನಿಧಿಸುವರು)**

**ವಿರುದ್ಧ**

**ಆರೋಪಿಗಳು** :

ಎ1) ಕಿರಣ್ ಬಿನ್ ರಮೇಶ್
ವಯಸ್ಸು 20 ವರ್ಷ.

ಎ2) ರಾಮ್ ಚರಣ್ ಬಿನ್ ರಾಮಕೃಷ್ಣಪ್ಪ
ವಯಸ್ಸು 21 ವರ್ಷ.

ಎ3) ಚರಣ್ ಬಿನ್ ರಮೇಶ್
ವಯಸ್ಸು 21 ವರ್ಷ.

ಎ4) ನರಸಿಂಹಮೂರ್ತಿ ಬಿನ್ ಗೋವಿಂದಪ್ಪ
ವಯಸ್ಸು 34 ವರ್ಷ.

ಎಲ್ಲರ ವಾಸಃ ಕಸಿನಾಯಕನಹಳ್ಳಿ,
ಕೊಡಿಗೇನಹಳ್ಳಿ ಹೋಬಳಿ,
ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

**(ಪ್ರತಿನಿಧಿಸುವವರುಃಶ್ರೀ.ಎಂ.ಹೆಚ್.ಆರ್., ವಕೀಲರು)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | **15-12-2024** |
| ದೂರು ನೀಡಿದ ದಿನಾಂಕ | : | **15-12-2024** |
| ಆರೋಪಿ ದಸ್ತಗಿರಿಯಾದ ದಿನಾಂಕ | : | - |
| ಆರೋಪಿ ಬಿಡುಗಡೆಯಾದ ದಿನಾಂಕ | : | - |
| ಆರೋಪಿ ನ್ಯಾಯಾಂಗ ಬಂಧನದ ಅವಧಿ | : | - |
| ಅಪರಾಧ ಸಂಖ್ಯೆಗಳು | : | ಭಾರತೀಯ ನ್ಯಾಯ ಸಂಹಿತೆ ಕಲಂ **329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ.3(5) |
| ವಿಚಾರಣೆ ಪ್ರಾರಂಭವಾದ ದಿನಾಂಕ | : | **24-07-2026** |
| ವಿಚಾರಣೆ ಮುಕ್ತಾಯವಾದ ದಿನಾಂಕ | : | **24-07-2026** |
| ತೀರ್ಪು | : | ಆರೋಪಿಗಳನ್ನು ಬಿಡುಗಡೆ ಮಾಡಲಾಗಿದೆ |

****

## ತೀರ್ಪು

ಕೊಡಿಗೇನಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಗಳ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ.**329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿರುತ್ತಾರೆ.

2. **ಅಭಿಯೋಜನೆಯವರ ಪ್ರಕರಣದ ಸಾರಾಂಶವೇನೆಂದರೆಃ-**

ದಿನಾಂಕ 15-12-2024 ರಂದು ಸಂಜೆ 04-00 ಗಂಟೆ ಸಮಯದಲ್ಲಿ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಸಿನಾಯಕನಹಳ್ಳಿ ಗ್ರಾಮದ ಚಾಸಾ-2 ರವರ ಮನೆಯ ಹಾಲ್ ನಲ್ಲಿ ಚಾಸಾ-1 ರಿಂದ ಚಾಸಾ-6 ರವರು ಮಾತನಾಡಿಕೊಂಡು ಕುಳಿತ್ತಿದ್ದಾಗ ಆರೋಪಿತರು ಅಪರಾಧ ಎಸಗುವ ಸಮಾನ

ಉದ್ದೇಶದಿಂದ ಹಳೆಯ ದ್ವೇಷದ ಹಿನ್ನಲೆಯಲ್ಲಿ ಚಾಸಾ-2 ರವರ ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿ, 3 ಮತ್ತು 4ನೇ ಆರೋಪಿತರು ಚಾಸಾ-1 ರಿಂದ ಚಾಸಾ-6 ರವರನ್ನು ನೋಡಿ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, 1ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಹೊಟ್ಟೆಗೆ ಒದಿದ್ದು, 1 ನೇ ಆರೋಪಿ ಚಾಸಾ-1 ರವರ ಕೈ ಹಿಡಿದು ಎಳೆದಾಡಿದ್ದು, ನೀಲಗಿರಿ ದೊಣ್ಣೆಯಿಂದ 1ನೇ ಆರೋಪಿ ಚಾಸಾ-2 ರವರಿಗೆ ತಲೆಗೆ ಹೊಡೆದಿದ್ದು, 2ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ತಲೆಗೆ ಹೊಡೆದಿದ್ದು, 4ನೇ ಆರೋಪಿ ಚಾಸಾ-4 ರವರಿಗೆ ಸೀಮೆ ಜಾಲಿಮರದ ದೊಣ್ಣೆಯಿಂದ ತಲೆಗೆ, ಎಡಗೈಗೆ ಮತ್ತು ಎಡಗಾಲಿನ ತೊಡೆಗೆ ಹೊಡೆದಿದ್ದು, 1ನೇ ಆರೋಪಿ ಸೀಮೆ ಜಾಲಿಮರದ ದೊಣ್ಣೆಯಿಂದ ಚಾಸಾ-1ರವರ ತಲೆಗೆ ಮತ್ತು ಎಡಮೊಣಕೈಗೆ ಹೊಡೆದಿದ್ದು, 3ನೇ ಆರೋಪಿ ನೀಲಗಿರಿ ದೊಣ್ಣೆಯಿಂದ ಚಾಸಾ-5 ರವರ ತಲೆಗೆ ಹೊಡೆದಿದ್ದು, ಆರೋಪಿತರು ನೀಲಗಿರಿ ದೊಣ್ಣೆಯಿಂದ ಚಾಸಾ-1 ರಿಂದ ಚಾಸಾ-5 ರವರಿಗೆ ಹೊಡೆದಿದ್ದು, 1 ಮತ್ತು 2 ನೇ ಆರೋಪಿತರು ಚಾಸಾ-2 ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿರುವುದರಿಂದ ಸುಮಾರು 1000/-ರೂ. ಗಳಷ್ಟು ನಷ್ಟ ಉಂಟಾಗಿದ್ದು ಹಾಗೂ ಚಾಸಾ-1 ರಿಂದ 6 ರವರಿಗೆ ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಸುಮ್ಮನೆ ಬಿಡುವುದಿಲ್ಲ, ಸಾಯಿಸಿ ಜೈಲಿಗೆ ಹೋಗುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಚಾಸಾ-1ರವರು ದೂರು ನೀಡಿದ ಆಧಾರದ ಮೇಲೆ ಕೊಡಿಗೇನಹಳ್ಳಿ ಪೊಲೀಸರು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ **165/2024** ರಂತೆ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ**.329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ**.3(5)**

ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಪ್ರಕರಣ ದಾಖಲಿಸಿ, ಈ ಕೇಸಿನ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪಂಚನಾಮೆ ಮಾಡಿ, ಗಾಯ ಪ್ರಮಾಣ ಪತ್ರವನ್ನು ಪಡೆದು, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಆರೋಪಿತರಿಗೆ ಸಮನ್ಸ್ ಜಾರಿಗೊಳಿಸಿದ್ದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. ಭಾರತೀಯ ನ್ಯಾಯ ಸಂಹಿತೆ ಕಲಂ.203ರ ಅಡಿಯಲ್ಲಿ ಅಭಿಯೋಜನೆಯ ಕಡತದ ಪ್ರತಿಗಳನ್ನು ಆರೋಪಿತರಿಗೆ ಒದಗಿಸಿ ಉಭಯ ಪಕ್ಷಗಾರರ ವಾದವನ್ನು ಆಲಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ. **329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ.**3(5)**ರಡಿಯಲ್ಲಿ ಆರೋಪಣೆಯನ್ನು ರಚಿಸಲಾಯಿತು ಮತ್ತು ಭಾರತೀಯ ನ್ಯಾಯ ಸಂಹಿತೆ ಕಲಂ. **329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ.**3(5)** ರಡಿಯಲ್ಲಿ ರಚಿಸಲಾದ ಆರೋಪವನ್ನು ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ. ಆದಕಾರಣ ಪ್ರಕರಣದ ವಿಚಾರಣೆಯನ್ನು ಮುಂದುವರಿಸಲಾಯಿತು.

4. ಅಭಿಯೋಜನೆಯವರ ಪರವಾಗಿ ಸಾಕ್ಷಿದಾರರಾದ ನಾಗೇಶ್ ಆರ್. ರವರನ್ನು ಪ್ರಾಸಾ-1 ಎಂದು, ರಮಾದೇವಿಯವರನ್ನು ಪ್ರಾಸಾ-2 ಎಂದು,

ರಾಧಮ್ಮರವರನ್ನು ಪ್ರಾಸಾ-3 ಎಂದು, ನರಸಿಂಹಮೂರ್ತಿಯವರನ್ನು ಪ್ರಾಸಾ-4 ಎಂದು, ಅಂಜಮ್ಮರವರನ್ನು ಪ್ರಾಸಾ-5 ಎಂದು ಮತ್ತು ವಿಜಯಕುಮಾರ್ ರವರನ್ನು ಪ್ರಾಸಾ-6 ಎಂದು ವಿಚಾರಣೆ ಮಾಡಿ ನಿಪಿ-1 ರಿಂದ ನಿಪಿ-11 ದಸ್ತಾವೇಜುಗಳನ್ನು ಗುರುತಿಸಲಾಗಿದೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ-1 ರಿಂದ 6 ರವರು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸುವಂತೆ ಕೋರಿದರು. ಆದರೆ ಪ್ರಕರಣದ ಪ್ರಾಸಾ-1 ರಿಂದ 6 ರವರು ಅಭಿಯೋಜನೆಯವರ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಪರಿಗಣಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಡಲಾಯಿತು ಹಾಗೂ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿರುತ್ತದೆ.

5. ಉಭಯ ಪಕ್ಷಗಾರರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತ ಪರಿಶೀಲಿಸಲಾಯಿತು.

6. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ತೀರ್ಮಾನಕ್ಕೆ ಉದ್ಭವಿಸುತ್ತದೆಃ

**ಅಂಶಗಳು**

**ಅಂಶ-1** : ದಿನಾಂಕ 15-12-2024 ರಂದು ಸಂಜೆ 04-00 ಗಂಟೆ ಸಮಯದಲ್ಲಿ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಸಿನಾಯಕನಹಳ್ಳಿ ಗ್ರಾಮದ ಚಾಸಾ-2 ರವರ ಮನೆಯ ಹಾಲ್ ನಲ್ಲಿ

ಚಾಸಾ-1 ರಿಂದ ಚಾಸಾ-6 ರವರು ಮಾತನಾಡಿ ಕೊಂಡು ಕುಳಿತ್ತಿದ್ದಾಗ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಹಳೆಯ ದ್ವೇಷದ ಹಿನ್ನಲೆಯಲ್ಲಿ ಚಾಸಾ-2 ರವರ ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.326(4) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-2** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು 3 ಮತ್ತು 4ನೇ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-1 ರಿಂದ 6 ರವರನ್ನು ನೋಡಿ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹವಾಚಕ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-3** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ 1ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಹೊಟ್ಟೆಗೆ ಒದ್ದಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-4** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ 1ನೇ ಆರೋಪಿ ಚಾಸಾ-1 ರವರ ಕೈ ಹಿಡಿದು ಎಳೆದಾಡಿ ಅವಮಾನ ಪಡಿಸಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.74 ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-5** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ 1ನೇ ಆರೋಪಿ ನೀಲಗಿರಿ ದೊಣ್ಣೆಯಿಂದ ಚಾಸಾ-2 ರವರ ತಲೆಗೆ ಹೊಡೆದಿದ್ದು, 2ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ತಲೆಗೆ ಹೊಡೆದಿದ್ದು, 4ನೇ ಆರೋಪಿ ಚಾಸಾ-4 ರವರಿಗೆ ಸೀಮೆ ಜಾಲಿ ಮರದ ದೊಣ್ಣೆಯಿಂದ ತಲೆಗೆ, ಎಡಗೈಗೆ ಮತ್ತು ಎಡಗಾಲಿನ ತೊಡೆಗೆ ಹೊಡೆದಿದ್ದು, 1ನೇ ಆರೋಪಿ ಸೀಮೆ ಜಾಲಿಮರದ ದೊಣ್ಣೆಯಿಂದ ಚಾಸಾ-1ರವರ ತಲೆಗೆ ಮತ್ತು ಎಡಮೊಣಕೈಗೆ ಹೊಡೆದಿದ್ದು, 3ನೇ ಆರೋಪಿ ನೀಲಗಿರಿ ದೊಣ್ಣೆಯಿಂದ ಚಾಸಾ-5 ರವರ ತಲೆಗೆ ಹೊಡೆದಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.118(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-6** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಅಪರಾಧ ಎಸಗುವ

ಸಮಾನ ಉದ್ದೇಶದಿಂದ ನೀಲಗಿರಿ ದೊಣ್ಣೆಯಿಂದ ಚಾಸಾ-1 ರಿಂದ 5 ರವರಿಗೆ ಹೊಡೆದಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.324(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-7** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ 1 ಮತ್ತು 2ನೇ ಆರೋಪಿತರು ಚಾಸಾ-2 ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿರುವುದರಿಂದ ಸುಮಾರು 1000/-ರೂ. ಗಳಷ್ಟು ನಷ್ಟ ಉಂಟಾಗಿದ್ದು ಹಾಗೂ ಚಾಸಾ-1 ರಿಂದ 6 ರವರಿಗೆ ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಸುಮ್ಮನೆ ಬಿಡುವುದಿಲ್ಲ, ಸಾಯಿಸಿ ಜೈಲಿಗೆ ಹೋಗುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.351(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-8** : ಮಾಡುವ ಆದೇಶ ?

7. ಮೇಲಿನ ಅಂಶಗಳಿಗೆ ನಾನು ಕೆಳಗೆ ನೀಡಿರುವ ಕಾರಣಗಳಿಂದಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1** : ನಕಾರಾತ್ಮಕವಾಗಿ

**ಅಂಶ-2** : ನಕಾರಾತ್ಮಕವಾಗಿ

| | | |
|---|---|---|
| **ಅಂಶ-3** | : | ನಕಾರಾತ್ಮಕವಾಗಿ |
| **ಅಂಶ-4** | : | ನಕಾರಾತ್ಮಕವಾಗಿ |
| **ಅಂಶ-5** | : | ನಕಾರಾತ್ಮಕವಾಗಿ |
| **ಅಂಶ-6** | : | ನಕಾರಾತ್ಮಕವಾಗಿ |
| **ಅಂಶ-7** | : | ನಕಾರಾತ್ಮಕವಾಗಿ |
| **ಅಂಶ-8** | : | ಅಂತಿಮ ಆದೇಶದಂತೆ,<br>ಈ ಕೆಳಕಂಡ ಕಾರಣಗಳಿಗಾಗಿ |

## ಕಾರಣಗಳು

8. **ಅಂಶ-1 ರಿಂದ ಅಂಶ-7 :** ಸಂಗತಿಗಳ ಪುನರಾವರ್ತನೆಯನ್ನು ತಪ್ಪಸಲು ಅಂಶ-1 ರಿಂದ ಅಂಶ-7ನ್ನು ಒಟ್ಟಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

9. ಅಭಿಯೋಜನೆಯು ಪ್ರಾಸಾ-1 ನಾಗೇಶ್ ಆರ್. ಬಿನ್ ರಾಮಪ್ಪ ಎಂಬುವವರನ್ನು, ಈ ಘಟನೆಗೆ ಸಂಬಂಧಪಟ್ಟಂತೆ ದೂರುದಾರರಾಗಿ ವಿಚಾರಣೆ ಮಾಡಿದ್ದು ಈ ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತನ್ನ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಗೊತ್ತು, ಚಾಸಾ-2 ನನ್ನ ಅತ್ತಿಗೆ, ಚಾಸಾ-3 ನನ್ನ ತಂಗಿ, ಚಾಸಾ-4 ನನ್ನ ಅಕ್ಕ, ಚಾಸಾ-5 ನನ್ನ ತಮ್ಮ, ಚಾಸಾ-6 ನನ್ನ ಅಣ್ಣ, ಆರೋಪಿತರು ಎಂದೂ ಸಹ ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಚಾಸಾ-2 ರಿಂದ 5ರವರಿಗಾಗಲೀ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯಪಡಿಸಿರುವುದಿಲ್ಲ ಹಾಗೂ ನನಗೆ, ಚಾಸಾ-2 ರಿಂದ 6 ರವರಿಗೆ ಜೀವ

ಬೆದರಿಕೆ ಹಾಕಿರುವುದಿಲ್ಲ, ಚಾಸಾ-2ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಯಾವುದೇ ನಷ್ಟ ಉಂಟುಮಾಡಿರುವುದಿಲ್ಲ, ಈ ಸಂಬಂಧವಾಗಿ ನಾನಾಗಲೀ ಅಥವಾ ಚಾಸಾ-2 ರಿಂದ 5 ರವರಾಗಲೀ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ನಿಶಾನೆ ಪಿ-1 ರಂತಹ ದೂರು ಮತ್ತು ನಿಪಿ-2ರಂತಹ ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಆದರೆ ಅವುಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದಿರುವ ಇಟ್ಟಿಗೆ ಚೂರು, ಗಾಜಿನ ಚೂರು ಮತ್ತು ದೊಣ್ಣೆಗಳನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂಬುದು ತನಗೆ ಗೊತ್ತಿಲ್ಲ, ಅದೇರೀತಿ ನಿಶಾನೆ ಪಿ3ರಂತಹ ಫೋಟೋವನ್ನು ಗುರುತಿಸಿರುತ್ತಾರೆ. ಆದರೆ ನಿಪಿ-3ರಂತಹ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆದರು ಎಂಬುದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-1ರವರನ್ನು ಪಾಟೀ ಸವಾಲು ಮಾಡಿದ್ದರೂ ಸಹ ಪ್ರಾಸಾ-1ರವರು ಆರೋಪಿಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-2 ರಿಂದ 5ರವರಿಗಾಗಲೀ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯ ಪಡಿಸಿ, ತನಗೆ, ಚಾಸಾ-2 ರಿಂದ 6 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಅಂಶವನ್ನು ಈ ಸಾಕ್ಷಿಯ ಮೂಲಕ ನುಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿ ತಾನು ಪೊಲೀಸರ ಮುಂದೆ ಮರುಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ

ನಿಶಾನೆ ಪಿ-4ರಂತಹ ದಾಖಲೆ ಈ ಸಾಕ್ಷಿಯ ಹೇಳಿಕೆಯಾಗಿದ್ದು, ಈ ಸಾಕ್ಷಿಯ ಸಾಕ್ಷ್ಯ ನಿಪಿ-4ರಂತಹ ದಾಖಲೆಯಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಲ್ಲದೇ ತಾನು, ಚಾಸಾ-2 ರಿಂದ 6 ರವರು ಹಾಗೂ ಆರೋಪಿತರು ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ.

10. ಅಭಿಯೋಜನೆಯು ಪ್ರಾಸಾ-2 ರಮಾದೇವಿ, ಪ್ರಾಸಾ-3 ರಾಧಮ್ಮ, ಪ್ರಾಸಾ-5 ಅಂಜಮ್ಮ ಮತ್ತು ಪ್ರಾಸಾ-6 ವಿಜಯ ಕುಮಾರ್ ಎಂಬುವವರನ್ನು, ಈ ಘಟನೆಗೆ ಸಂಬಂಧಪಟ್ಟಂತೆ ಗಾಯಾಳುಗಳಾಗಿ ವಿಚಾರಣೆ ಮಾಡಿದ್ದು ಈ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿತರು ಗೊತ್ತು, ಆರೋಪಿತರು ಎಂದೂ ಸಹ ಅಪರಾಧ ಎಸಗುವ ಸಮಾನ ಉದ್ದೇಶದಿಂದ ತಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿತರು ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತ್ರೀವ್ರ ಸ್ವರೂಪದ ಗಾಯ ಪಡಿಸಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ, ಚಾಸಾ-2ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಯಾವುದೇ ನಷ್ಟ ಉಂಟುಮಾಡಿರುವುದಿಲ್ಲ, ಈ ಸಂಬಂಧವಾಗಿ ತಾವುಗಳು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ, ನ್ಯಾಯಾಲಯದ ಮುಂದಿರುವ ಇಟ್ಟಿಗೆ ಚೂರು, ಗಾಜಿನ ಚೂರು ಮತ್ತು ದೊಣ್ಣೆಗಳನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂಬುದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ

ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-2, 3, 5 ಮತ್ತು 6 ರವರನ್ನು ಪಾಟೀ ಸವಾಲು ಮಾಡಿದ್ದರೂ ಸಹ ಪ್ರಾಸಾ-2, 3, 5 ಮತ್ತು 6 ರವರು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-2 ರಿಂದ 5ರವರಿಗಾಗಲೀ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತ್ರೀವ್ರ ಸ್ವರೂಪದ ಗಾಯ ಪಡಿಸಿ, ಚಾಸಾ-1 ರಿಂದ 6 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಅಂಶವನ್ನು ಈ ಸಾಕ್ಷಿದಾರರ ಮೂಲಕ ನುಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿ ಈ ಸಂಬಂಧವಾಗಿ ತಾವು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-6, 7, 8, 10 ಮತ್ತು ನಿಪಿ-11ರಂತಹ ದಾಖಲೆಗಳು ಈ ಸಾಕ್ಷಿದಾರರ ಹೇಳಿಕೆ ಮತ್ತು ಮರು ಹೇಳಿಕೆಗಳಾಗಿದ್ದು, ಈ ಸಾಕ್ಷಿದಾರರ ಸಾಕ್ಷ್ಯ ನಿಪಿ-6, 7, 8, 10 ಮತ್ತು ನಿಪಿ-11ರಂತಹ ದಾಖಲೆಗಳಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಲ್ಲದೇ ತಾವುಗಳು, ಚಾಸಾ-1, 4 ಹಾಗೂ ಆರೋಪಿತರು ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ.

11. ಅಭಿಯೋಜನೆಯು ಪ್ರಾಸಾ-4 ನರಸಿಂಹಮೂರ್ತಿ ಎಂಬುವವರನ್ನು, ಈ ಘಟನೆಗೆ ಸಂಬಂಧಪಟ್ಟಂತೆ ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿತರು ಗೊತ್ತು, ಆರೋಪಿತರು ಎಂದೂ ಸಹ ಅಪರಾಧ ಎಸಗುವ ಸಮಾನ ಉದ್ದೇಶದಿಂದ

ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಆರೋಪಿತರು ಚಾಸಾ-2 ರಿಂದ 5 ರವರಿಗೆ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯ ಪಡಿಸಿರುವುದಿಲ್ಲ ಹಾಗೂ ತನಗೆ, ಚಾಸಾ-1, 2, 3, 5 ಮತ್ತು 6 ರವರಿಗೆ ಜೀವ ಬೆದರಿಕೆ ಹಾಕಿರುವುದಿಲ್ಲ, ಚಾಸಾ-2ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಯಾವುದೇ ನಷ್ಟ ಉಂಟುಮಾಡಿರುವುದಿಲ್ಲ, ಈ ಸಂಬಂಧವಾಗಿ ಚಾಸಾ-1 ರಿಂದ 3, 5 ರವರು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ, ನ್ಯಾಯಾಲಯದ ಮುಂದಿರುವ ಇಟ್ಟಿಗೆ ಚೂರು, ಗಾಜಿನ ಚೂರು ಮತ್ತು ದೊಣ್ಣೆಗಳನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂಬುದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-4 ರವರನ್ನು ಪಾಟೀ ಸವಾಲು ಮಾಡಿದ್ದರೂ ಸಹ ಪ್ರಾಸಾ-4 ರವರು ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-2 ರಿಂದ 5 ರವರಿಗೆ ಕೈಗಳಿಂದ, ದೊಣ್ಣೆಯಿಂದ ಹಲ್ಲೆ ಮಾಡಿ ಸಾಮಾನ್ಯ ಹಾಗೂ ತ್ರೀವ್ರ ಸ್ವರೂಪದ ಗಾಯ ಪಡಿಸಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಅಂಶವನ್ನು ಈ ಸಾಕ್ಷಿದಾರರ ಮೂಲಕ ನುಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿ ಈ ಸಂಬಂಧವಾಗಿ ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-9ರಂತಹ ದಾಖಲೆ ಈ ಸಾಕ್ಷಿದಾರರ ಹೇಳಿಕೆಯಾಗಿದ್ದು, ಈ ಸಾಕ್ಷಿ ಸಾಕ್ಷ್ಯ ನಿಪಿ-9ರಂತಹ ದಾಖಲೆಯಲ್ಲಿ

ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಲ್ಲದೇ ತಾವು, ಚಾಸಾ-1 ರಿಂದ 5ರವರು ಹಾಗೂ ಆರೋಪಿತರು ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ.

12. ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ರವರು ದೂರುದಾರರು, ಪ್ರಾಸಾ-2, 3, 5 ಮತ್ತು 6ರವರು ಗಾಯಾಳುಗಳಾಗಿ ಮತ್ತು ಪ್ರಾಸಾ-4 ರವರನ್ನು ಪ್ರತ್ಯಕ್ಷ ಸಾಕ್ಷಿದಾರರಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ತಾವು ಮತ್ತು ಆರೋಪಿತರು ಪರಿಚಯಸ್ಥರಾಗಿದ್ದು, ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ. ಈ ಅಂಶವನ್ನು ಪರಿಶೀಲಿಸಿದಾಗ ಉಭಯ ಪಕ್ಷಗಾರರು ಸಹ ಪರಸ್ಪರ ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುತ್ತೇವೆ ಎಂಬುದಾಗಿ ಒಪ್ಪಿರುತ್ತಾರೆ. ಈ ಬಗ್ಗೆ ಕಾನೂನಿನಲ್ಲಿ ಅವಕಾಶವಿರುವುದರಿಂದ ರಾಜಿಗೆ ಅವಕಾಶ ನೀಡಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ಫಿರ್ಯಾದಿ, ಸ್ಥಳ ಪಂಚನಾಮೆ, ಗಾಯಾಳುಗಳು, ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಸಾಕ್ಷಿದಾರರ ಹೇಳಿಕೆಗಳಲ್ಲಿ ಹೇಳಲಾದ ಅಂಶಗಳನ್ನು ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿತರ ಮೇಲೆ ಆರೋಪಿಸಿದ ಅಪರಾಧ ಮಾಡಿದ್ದಾರೆಂದು ತೋರ್ಪಡಿಸುವ ಯಾವುದೇ ಸಾಕ್ಷ್ಯಗಳು ಇಲ್ಲದೇ ಇರುವ ಕಾರಣ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಿದ ಆಪಾದನೆಗಳನ್ನು ನಿಸ್ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ

ವಿಫಲವಾಗಿದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ-1 ರಿಂದ ಅಂಶ-7ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. **<u>ಅಂಶ-8:</u>** ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಗೆ, ಈ ನ್ಯಾಯಾಲಯ ಈ ಕೆಳಕಂಡಂತೆ ಆದೇಶವನ್ನು ಮಾಡಿರುತ್ತದೆ.

**<u>ಆದೇಶ</u>**

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.**271(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ.**329(4), 352, 115(2), 74, 118(1), 324(2), 351(2)** ಸಹವಾಚಕ ಕಲಂ.**3(5)** ರಡಿಯಲ್ಲಿ ಅಪರಾಧಗಳ ಆರೋಪದಿಂದ ನಿರ್ದೋಷಿಗಳೆಂದು ನಿರ್ಣಯಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಜಾಮೀನು ಮುಚ್ಚಳಿಕೆ ಮತ್ತು ಜಾಮೀನು ಭದ್ರತೆಗಳನ್ನು ರದ್ದುಪಡಿಸಿದೆ.

ಪಿ.ಆರ್. ಸಂಖ್ಯೆ 4/2026 ರಲ್ಲಿ ಹಾಜರು ಪಡಿಸಲಾದ (1) 2½ ಅಡಿ ಉದ್ದದ ನೀಲಗಿರಿ ಮರದ ದೊಣ್ಣೆ, (2) 2½ ಅಡಿ ಉದ್ದದ ಸೀಮೆಜಾಲಿ ಮರದ ದೊಣ್ಣೆ, (3) 3/4 ಭಾಗ ಒಂದು ಇಟ್ಟಿಗೆ ಚೂರು, (4) 3/4 ಭಾಗ ಒಂದು ಇಟ್ಟಿಗೆ ಚೂರು ಮತ್ತು (5) ಕಿಟಕಿಯ ಗಾಜಿನ

ಚೂರುಗಳು ಮೌಲ್ಯರಹಿತ ವಸ್ತುಗಳಾದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

**(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದು ಪಡಿಗಳನ್ನು ಮಾಡಿದ ನಂತರ ತೆಗೆದ ನ್ಯಾಯಾಲಯಾದಲ್ಲಿ ದಿನಾಂಕ 27ನೇ ಜುಲೈ 2026 ರಂದು ತೀರ್ಪನ್ನು ಘೋಷಿಸಲಾಯಿತು)**

**Sd/-**
**(ವೆಂಕಟಪ್ಪ ಬಿ.)**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಮಧುಗಿರಿ.**

## ಅನುಬಂಧ

**ಅ) ಅಭಿಯೋಜಕರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:**

| | | |
|---|---|---|
| ಪ್ರಾಸಾ-1 | : | ನಾಗೇಶ್ ಆರ್. |
| ಪ್ರಾಸಾ-2 | : | ರಮಾದೇವಿ |
| ಪ್ರಾಸಾ-3 | : | ರಾಧಮ್ಮ |
| ಪ್ರಾಸಾ-4 | : | ನರಸಿಂಹಮೂರ್ತಿ |
| ಪ್ರಾಸಾ-5 | : | ಅಂಜಮ್ಮ |
| ಪ್ರಾಸಾ-6 | : | ವಿಜಯಕುಮಾರ್ |

**ಆ) ಅಭಿಯೋಜಕರ ಪರ ಗುರುತಿಸಿಕೊಂಡಿರುವ ದಾಖಲೆಗಳು:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಪ್ರಾಸಾ-1ರವರ ಸಹಿ |
| ನಿಪಿ-2 | : | ಸ್ಥಳ ಪಂಚನಾಮೆ |
| ನಿಪಿ-2(ಎ) | : | ಪ್ರಾಸಾ-1ರವರ ಸಹಿ |
| ನಿಪಿ-3 | : | ಒಂದು ಫೋಟೋ |
| ನಿಪಿ-4 | : | ಪ್ರಾಸಾ-1ರವರ ಮರು ಹೇಳಿಕೆ |
| ನಿಪಿ-5 | : | ಪ್ರಾಸಾ-2ರವರ ಕಲಂ.183 ಬಿ.ಎಸ್.ಎ. ರ ದೃಡೀಕರಣ ಪತ್ರ |

| | | |
|---|---|---|
| ನಿಪಿ-5(ಎ) | : | ಪ್ರಾಸಾ-2ರವರ ಸಹಿ |
| ನಿಪಿ-6 ಮತ್ತು 7 | : | ಪ್ರಾಸಾ-2ರವರ ಹೇಳಿಕೆ ಮತ್ತು ಮರು ಹೇಳಿಕೆ |
| ನಿಪಿ-8 | : | ಪ್ರಾಸಾ-3ರವರ ಹೇಳಿಕೆ |
| ನಿಪಿ-9 | : | ಪ್ರಾಸಾ-4ರವರ ಹೇಳಿಕೆ |
| ನಿಪಿ-10 | : | ಪ್ರಾಸಾ-5ರವರ ಹೇಳಿಕೆ |
| ನಿಪಿ-11 | : | ಪ್ರಾಸಾ-6ರವರ ಹೇಳಿಕೆ |

**ಇ) ಅಭಿಯೋಜಕರ ಪರ ಗುರುತಿಸಿಕೊಂಡಿರುವ ಮುದ್ದೆ ಮಾಲುಗಳು:**

-ಇಲ್ಲ-

**ಈ) ಆರೋಪಿತರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:**

-ಇಲ್ಲ-

**ಉ) ಆರೋಪಿತರ ಪರ ಗುರುತಿಸಿಕೊಂಡಿರುವ ದಾಖಲೆಗಳು:**

-ಇಲ್ಲ-

**Sd/-**
**(ವೆಂಕಟಪ್ಪ ಬಿ.)**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಮಧುಗಿರಿ.**